ಹೇಳಿಬಿಟ್ಟ. ಅದರಿಂದ ನನಗೇನು ಮೈಗೆ ಗಾಯವಾಯಿತೇ? ಬಿಡು" ಎಂದು.

ಎರಡು ದಿನಗಳ ನಂತರ ಅದೇ ಅಂಗಡಿ ರಾಮಯ್ಯ ರುದ್ರಪ್ಪನಲ್ಲಿ ಬಂದು, "ಸ್ವಾಮೀ ರುದ್ರಪ್ಪನವರೇ, ನಾನು ಬಹಳ ಫಜೀತಿಯಲ್ಲಿ ಬಿದ್ದಿದ್ದೇನೆ. ದೂರದ ಗುಡ್ಡೆ ಕಿಂಚಣ್ಣನಿಗೆ ಬಾಯಿಮಾತಿನ ನಂಬಿಕೆಯ ಆಧಾರದ ಮೇಲೆ ಸಾಲ ಕೊಟ್ಟಿದ್ದೆ. ಈಗ ಆತ ಹೇಳುತ್ತಾನೆ: ಕೋರ್ಟಿಗೆ ಹೋಗು. ಒಂದು ಕಾಸೂ ಸಿಕ್ಕದು. ನಿನ್ನಲ್ಲಿ ಏನು ಸಾಕ್ಷಿ ಇದೆ? ಎಂದು. ನನಗೀಗ ಬಹಳ ಅಗತ್ಯವಿದೆ. ಪೇಟೆಯ ದೊಡ್ಡ ಅಂಗಡಿಯ ಸಾಹುಕಾರರಿಗೆ ನಾನು ಕೂಡಲೇ ಹಣ ಕೊಡಬೇಕಾಗಿದೆ. ಇಲ್ಲವಾದರೆ ಜೇಲಿಗೆ ಹೋಗಬೇಕಾದೀತು. ನನಗೆ ಏನೂ ತಿಳಿಯುವುದಿಲ್ಲ. ನೀವು ತಿಳಿದವರು, ವಿವೇಕಿಗಳು. ಏನಾದರೂ ಹಾದಿ ತೋರಿಸಿ" ಎಂದು ರೋದಿಸಿದ.

ರುದ್ರಪ್ಪ ಕಿಂಚಣ್ಣನನ್ನು ಕರೆಯಿಸಿ ಸಮಾಧಾನದಲ್ಲಿ ನಯದಿಂದ ಮಾತನಾಡಿದ. ಅವನ ಭಾರವಾದ ಕೈಗಳು ಕಿಂಚಣ್ಣನ ಹೆಗಲ ಮೇಲೆ ಇದ್ದುದರಿಂದ ನಯದೊಡನೆ ಸಾಕಷ್ಟು ಭಯವೂ ಮಿಶ್ರಿತವಾಗಿದ್ದಿತು. ಆದುದರಿಂದ ಕಿಂಚಣ್ಣ ಕೂಡಲೇ "ಛೇ! ನಾನು ಎಂದೂ ಹಾಗೇ ನಿರಾಕರಿಸಲಿಲ್ಲ. ರಾಮಯ್ಯನವರು ತಪ್ಪು ಗ್ರಹಿಸಿಕೊಂಡಿರಬೇಕು. ಆ ದಿನ ಸ್ವಲ್ಪ ಅಡಚಣೆಯಲ್ಲಿದ್ದೆ. ಈಗ ಹಣ ತಯಾರಿದೆ. ನಾನೇನು ಪರರ ಗಂಟನ್ನು ನುಂಗುವ ದುಷ್ಟನೇ?" ಎಂದು ಹೇಳಿ ರುದ್ರಪ್ಪನ ಸಮಕ್ಷಮದಲ್ಲೇ ಹಣ ಸಲ್ಲಿಸಿದ. ಅಂಗಡಿ ರಾಮಯ್ಯ "ರುದ್ರಪ್ಪನವರೇ ನೀವು ನನ್ನ ಜೀವ ಉಳಿಸಿದಿರಿ" ಎಂದು ರುದ್ರಪ್ಪನ ಕಾಲು ಮುಟ್ಟಿ ಹೋದ.

ಹಾಗೆಂದು ಸದಾ ಸರ್ವದಾ ಶಾಂತಮೂರ್ತಿ ಎಂದು ತಿಳಿಯಬೇಡಿರಿ. ಒಂದು ದಿನ ಗಾಡಿ ಐತಪ್ಪ ತನ್ನ ಎತ್ತಿಗೆ ಮರದ ಕೊರಡೆಯಿಂದ ವಿಪರೀತವಾಗಿ ಹೊಡೆಯುತ್ತಿದ್ದ. ಏನೋ ಹೆಂಡ ಕುಡಿದಿದ್ದನೋ? ಅಥವಾ ಮನೆಯಲ್ಲಿ ಹೆಂಡತಿಯೊಡನೆ ಜಗಳವಾಡಿ ಪರಾಭೂತನಾಗಿ ಆ ರೋಷವನ್ನು ತೋಡಿಕೊಳ್ಳುತ್ತಿದ್ದನೋ? ಅಥವಾ ಧನಿಯಿಂದ ಬೈಗಳ ತಿಂದ ಆ ಆಕ್ರೋಶವನ್ನು ಹೊರ ಕಾರುತ್ತಿದ್ದನೋ ಅಥವಾ ಹೊಟ್ಟೆ ಹಸಿದಿತ್ತೋ? ಅದು ಏನೇ ಇರಲಿ. ವಿಪರೀತವಾಗಿ ಆ ಮೂಕಪ್ರಾಣಿಯನ್ನು ಹೊಡೆಯುತ್ತಿದ್ದ. ರುದ್ರಪ್ಪ ಅದನ್ನು ನೋಡಿ ಆತನನ್ನು ತಡೆಯಲು ಯತ್ನಿಸಿದ. ಗಾಡಿ ಐತಪ್ಪ "ಇದು ನನ್ನ ಎತ್ತು, ನಾನು ಹೊಡೆಯುತ್ತೇನೆ. ತಡೆಯಲು ನಿನಗೇನು ಅಧಿಕಾರ?" ಎಂದು ಆರ್ಭಟಿಸಿದ.

ರುದ್ರಪ್ಪ ಆತನ ಬೆನ್ನ ಮೇಲೆ ಬಲವಾಗಿ ಒಂದು ಗುದ್ದಿಟ್ಟು "ಅದು ನಿನ್ನ ಎತ್ತು, ಇದು ನಿನ್ನ ಬೆನ್ನು, ಇದು ನನ್ನ ಗುದ್ದು" ಎಂದು ಮೂರು ಸರಳ ವಾಕ್ಯಗಳ ಉತ್ತರ ಕೊಟ್ಟ. ಐತಪ್ಪನ ಬಾಯಿಯಿಂದ ಒಂದಷ್ಟು ಹೆಂಡದ ಜಲಪಾತ ಬಳಬಳ ಎಂದು ಹೊರಹೊಮ್ಮಿತು. ಕಣ್ಣುಗಳನ್ನು ಸರಿಯಾಗಿ ವಿಶಾಲವಾಗಿ ತೆರೆದು ತಲೆ ತುರಿಸಿಕೊಂಡು ತುಸು ಗಹನವಾಗಿ ಯೋಚಿಸಿ "ಅದು ನ್ಯಾಯ ಸರಿ" ಎಂದು ಒಪ್ಪಿಕೊಂಡ. ಮತ್ತೆ ಮರದ ಕೊರಡೆಯನ್ನು ದೂರಕ್ಕೆ ಬಿಸಾಕಿ ಎತ್ತಿನ ಮೈಪೂಸುತ್ತಾ ಅದಕ್ಕೆ ಹುಲ್ಲು ಹಾಕಿ ನೀರು ಕೊಡಲು ಆರಂಭಿಸಿದ.

★★★

ಮನುಷ್ಯ ಎಷ್ಟೇ ಶಾಂತನಾಗಿರಲಿ ಸಮಾಧಾನಿಯಾಗಿರಲಿ ಸದ್ಗುಣಿಯಾಗಿರಲಿ, ವಿಪತ್ತುಗಳು ಬರಬಹುದು. ವಿಧಿಚಿತ್ತವನ್ನು ಯಾರು ಬಲ್ಲರು?

ಪಾಪ! ಆಗಬಾರದ್ದು ಆಗಿಯೇ ಹೋಯಿತು. ಪ್ರಾರಬ್ಧ ಕರ್ಮಾಂತರ.

ನಮ್ಮ ಊರಿನ ಗುಡಿಸಲು ಸಂಜೀವನ ಮಗ ಸಣ್ಣ ಹುಡುಗನಾಗಿದ್ದಾಗಲೇ ಮನೆಬಿಟ್ಟು ಮುಂಬಯಿಗೆ ಓಡಿಹೋಗಿದ್ದ. ಮನೆಯಲ್ಲಿ ತಾಪತ್ರಯ. ಸಣ್ಣ ತುಂಡುಗದ್ದೆಯಲ್ಲಿ ಏನು ಜೀವನ